# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 30.07.2019 ರಂದು ಮಧ್ಯಾಹ್ನ 10.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ವಿದ್ಯಾಶಂಕರ್ ಎಸ್. ಇವರ ಅಧ್ಯಕ್ಷತೆಯಲ್ಲಿ ನಡೆದ 12ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ವಿದ್ಯಾಶಂಕರ್ ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು.<br>ಕರಾಮುವಿ. ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ.<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. | **ಪ್ರೊ. ಎ, ರಂಗಸ್ವಾಮಿ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು. |
| **ಡಾ|| ಲಕ್ಷ್ಮಿ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ. ಮೈಸೂರು | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

30/7/19

ಕುಲಸಚಿವರು

ಕುಲಪತಿಗಳು

30/7/19.

ವಿಷಯ ಸಂಖ್ಯೆ : 12:01

ವಿಷಯ: AAOU 2021 Bid Submission ಕುರಿತು ಅನುಮೋದಿಸುವ ಬಗೆಗೆ.

----

Asian Association of Open University ಇದು ಏಷ್ಯಾ ಖಂಡದಲ್ಲಿರುವ ಮುಕ್ತ ವಿಶ್ವವಿದ್ಯಾನಿಲಯಗಳು ನೀಡುತ್ತಿರುವ ದೂರಶಿಕ್ಷಣಕ್ಕೆ ಸಂಬಂಧಿಸಿದೆ. ಈ ಸಂಸ್ಥೆಯು ಗುಣಮಟ್ಟದ ದೂರಶಿಕ್ಷಣ ಜೊತೆಗೆ ನಿರ್ವಹಣೆ, ಬೋಧನೆ ಮತ್ತು ಸಂಶೋಧನೆಯನ್ನು ಉತ್ತೇಜಿಸುತ್ತದೆ. ಈ ಸಂಸ್ಥೆಯು ಸರ್ಕಾರದ ವೃತ್ತಿಪರ ಸಂಸ್ಥೆಗಳ ಜೊತೆ ಸಂಪರ್ಕವಿಟ್ಟುಕೊಂಡು ದೂರಶಿಕ್ಷಣವನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುತ್ತದೆ.

ಈ ಸಂಸ್ಥೆಯು ಪ್ರತಿ ವರ್ಷವೂ ಏಷ್ಯಾ ಖಂಡದಲ್ಲಿನ ಪ್ರತಿ ದೇಶದಲ್ಲಿ ಅಂತರ್ ರಾಷ್ಟ್ರೀಯ ಸಮ್ಮೇಳನ ಆಯೋಜಿಸುತ್ತದೆ. 2021ರಲ್ಲಿ ಕರಾಮುವಿ, ಮೈಸೂರಿನಲ್ಲಿ ಈ ಕಾರ್ಯಕ್ರಮ ಆಯೋಜಿಸುವಂತೆ ಸಂಘಟನಾಕಾರರಾದ ಗೌತಮ್ ಮೆನನ್, ಇವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳನ್ನು ವಿನಂತಿಸಿರುತ್ತಾರೆ. ಈ ಸಮ್ಮೇಳನ ನಡೆಸಲು ಸಂಘಟನಾಕಾರರು Bidding ನಲ್ಲಿ participate ಮಾಡಿ ಅದಕ್ಕೆ ತಗಲುವ ವೆಚ್ಚ ರೂ. 40,00,000/- + ತೆರಿಗೆಗಳು ಸೇರಿ. ಸಂಘಟನಾಕಾರರು ಸಮ್ಮೇಳನದ ವ್ಯವಸ್ಥೆಯನ್ನು ಮಾಡಲು ಒಪ್ಪಿರುತ್ತಾರೆ. ಈ ಬಗ್ಗೆ ನೋಂದಣಿ ಶುಲ್ಕ ರೂ. 63 ಲಕ್ಷ ಆದಾಯವಾಗಿ ಬರುತ್ತದೆ. Bidding ಖರ್ಚು ಕಳೆದು ವಿಶ್ವವಿದ್ಯಾನಿಲಯಕ್ಕೆ ರೂ. 23 ಲಕ್ಷ ಆದಾಯವಾಗುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಸಮ್ಮೇಳನಕ್ಕೆ ಸಂಬಂಧಪಟ್ಟ Main theme and Sub theme ಗಳನ್ನು ಸಿದ್ಧಪಡಿಸಬೇಕಾಗುತ್ತದೆ. ದೇಶದಲ್ಲಿ ಈವರೆವಿಗೂ IGNOU ಮಾತ್ರ ಈ ಸಮ್ಮೇಳನವನ್ನು ನಡೆಸಿದ್ದು, ಕರಾಮುವಿಯು ಈ ಸಮ್ಮೇಳನವನ್ನು ನಡೆಸಿದ್ದಲ್ಲಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಬಹುದಾಗಿದೆ.

ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಿದ್ಧಪಡಿಸಲಾಗಿದ್ದು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲು ಅಗತ್ಯ ಅನುಮೋದನೆ ಕೋರಿದೆ.

ತೀರ್ಮಾನ : **AAOU** ಸಮ್ಮೇಳನವನ್ನು ಪ್ರತಿ ವರ್ಷ ವಿವಿಧ ದೇಶಗಳಲ್ಲಿರುವ ಮುಕ್ತ ವಿಶ್ವವಿದ್ಯಾನಿಲಯಗಳು **on rotation** ಮೇರೆಗೆ ನಡೆಸುತ್ತಿವೆ. ಈ ಸಮ್ಮೇಳನದಲ್ಲಿ ಏಷ್ಯಾ ಖಂಡದಲ್ಲಿರುವ ಎಲ್ಲಾ ಮುಕ್ತ ವಿಶ್ವವಿದ್ಯಾನಿಲಯಗಳು ಭಾಗವಹಿಸಿ ಅವುಗಳ ಶೈಕ್ಷಣಿಕ, ತಾಂತ್ರಿಕ, ಕಲಿಕಾರ್ಥಿ ಸಹಾಯ ಕೇಂದ್ರಗಳ ಬಗೆಗಿನ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತವೆ. ಭಾರತ ದೇಶದಲ್ಲಿನ **IGNOU** ಎರಡು ಬಾರಿ ಈ ಸಮ್ಮೇಳನವನ್ನು ಆಯೋಜಿಸಿದೆ. ಇತರೆ ವಿಶ್ವವಿದ್ಯಾನಿಲಯಗಳಂತೆ ಕರಾಮುವಿಯು ಈ ಸಮ್ಮೇಳನ ಆಯೋಜಿಸಲು **Bidding** ನಲ್ಲಿ ಭಾಗವಹಿಸುವ ಅಗತ್ಯತೆಯನ್ನು ಶೈಕ್ಷಣಿಕ ಮಂಡಳಿಯ ಸಭೆಯು ಕೂಲಂಕಶವಾಗಿ ಚರ್ಚಿಸಿತು. ಇಂತಹ **Bidding**ಗೆ ರೂ. 40 ಲಕ್ಷ + ತೆರಿಗೆಗಳು ಪಾವತಿಸಬೇಕಾಗುತ್ತದೆ. ಈ ಸಮ್ಮೇಳನವನ್ನು ಆಯೋಜಿಸಿದಲ್ಲಿ ರೂ. 63 ಲಕ್ಷ ನೋಂದಣಿಯಿಂದಲೇ ಬರುತ್ತದೆ. ವಿಶ್ವವಿದ್ಯಾನಿಲಯವು ಈ ಸಮ್ಮೇಳನವನ್ನು ಆಯೋಜಿಸಿದಲ್ಲಿ ಅದರ ಘನತೆ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು **AAOU Bidding** ನಲ್ಲಿ ಭಾಗವಹಿಸಲು ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

---

30/7/19

ಕುಲಸಚಿವರು

ಕುಲಪತಿಗಳು

30/7/19.

ವಿಷಯ ಸಂಖ್ಯೆ : 12:02

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ದೇಶದ ವಿವಿಧ ಮುಕ್ತ ವಿಶ್ವವಿದ್ಯಾನಿಲಗಳ ಕುಲಪತಿಗಳ ಸಮ್ಮೇಳನವನ್ನು ಅಯೋಜಿಸುತ್ತಿರುವ ಬಗ್ಗೆ.

----

ದೇಶದಲ್ಲಿ 15 ಮುಕ್ತ ವಿಶ್ವವಿದ್ಯಾನಿಲಯಗಳಿದ್ದು UGC ODL- Regulations 2017 ಪ್ರಕಾರ ಹಲವು ತಾಂತ್ರಿಕ ಸಮಸ್ಯೆಗಳು / ಮಾನ್ಯತೆ ವಿಚಾರ / Gross Enrollment ratio ವೃದ್ಧಿಪಡಿಸುವುದು. 2019ರ ರಾಷ್ಟ್ರೀಯ ಶಿಕ್ಷಣ ನೀತಿ, ದೂರ ಶಿಕ್ಷಣದ ಭೌಗೋಳಿಕ ವ್ಯಾಪ್ತಿ, MOOCs ಇತ್ಯಾದಿ ಕುರಿತು ಹಲವು ಸಮಸ್ಯೆಗಳನ್ನು ಎದುರುಸುತ್ತಿವೆ. ಸದರಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ದೇಶದ ಎಲ್ಲಾ 15 ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಎರಡು ದಿನಗಳ ಸಮ್ಮೇಳನಕ್ಕೆ ಆಹ್ವಾನಿಸಿ ಮುಕ್ತ ವಿಶ್ವವಿದ್ಯಾನಿಲಯಗಳ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ, ಅಗತ್ಯ ಶಿಫಾರಸ್ಸುಗಳನ್ನು ಸಿದ್ಧಪಡಿಸಿದೆ. ಈ ಸಮ್ಮೇಳನದಲ್ಲಿ UGC / MHRD ರಾಜ್ಯ ಸರ್ಕಾರದ ಪ್ರತಿನಿಧಿಗಳು ಭಾಗವಹಿಸುವರು. UGC / NCTE / ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ, ಉನ್ನತ ಶಿಕ್ಷಣ ಇಲಾಖೆ ಮತ್ತು ಉನ್ನತ ಶಿಕ್ಷಣ ಪರಿಷತ್, ಕರ್ನಾಟಕ ಸರ್ಕಾರ, ಇವರುಗಳಿಗೆ ಪತ್ರ ಬರೆದು ನಿಯಮಗಳಲ್ಲಿ ಅಗತ್ಯ ತಿದ್ದುಪಡಿ ಮಾಡಲು ಈ ಸಮ್ಮೇಳನ ಉತ್ತೇಜಿಸುತ್ತದೆ. ದಿನಾಂಕ: 20 ಮತ್ತು 21ನೇ ಸೆಪ್ಟೆಂಬರ್ 2019 ರಂದು ನಡೆಸುವ ಎರಡು ದಿನಗಳ ಸಮ್ಮೇಳನದ ಬಗ್ಗೆ brochure ಸಿದ್ಧಪಡಿಸಲಾಗಿದ್ದು, ಅದನ್ನು ಒಳಗೊಂಡಂತೆ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿದ್ದು ಸೂಕ್ತ ಅನುಮೋದನೆ ಕೋರಿದೆ.

ತೀರ್ಮಾನ : ಭಾರತ ದೇಶದಲ್ಲಿ 15 ಮುಕ್ತ ವಿಶ್ವವಿದ್ಯಾನಿಲಯಗಳು ದೂರಶಿಕ್ಷಣವನ್ನು ನೀಡುತ್ತಿವೆ. 2017 ಯುಜಿಸಿ ದೂರಶಿಕ್ಷಣ ನಿಯಮಾವಳಿಗಳ ಅಧಿಸೂಚನೆಯಿಂದ ಮುಕ್ತ ವಿಶ್ವವಿದ್ಯಾನಿಲಯಗಳು **Dual mode Universities** ಗಳಿಂದ ಅನಾರೋಗ್ಯ ಪೈಪೋಟಿ, **Unfair practices,** ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಉಂಟಾಗುತ್ತಿರುವ ಸಮಸ್ಯೆಗಳು, **Multiple regulatory body** ಗಳಿಂದ ಆಗುತ್ತಿರುವ ಗೊಂದಲ, **Foundation Course** ಆರಂಭಿಸುವ ಕುರಿತು ಬರುವ ಸಮಸ್ಯೆಗಳು ಇತ್ಯಾದಿಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಯುಜಿಸಿ ಅಧಿಕಾರಿಗಳು, **MHRD** ಗೆ ಸಂಬಂಧಿಸಿದವರು ಮತ್ತು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ರಾಜ್ಯದ ಉನ್ನತ ಶಿಕ್ಷಣ ಪರಿಷತ್‌ನ ಅಧಿಕಾರಿಗಳನ್ನು ಒಳಗೊಂಡಂತೆ ಎರಡು ದಿನದ ಸಮ್ಮೇಳನವನ್ನು ಸೆಪ್ಟೆಂಬರ್ 6 ಮತ್ತು 7 2019ರಲ್ಲಿ ನಡೆಸಲು ಸಭೆ ನಿರ್ಣಯಿಸಿತು.

----

30/11/19

ಕುಲಸಚಿವರು

ಕುಲಪತಿಗಳು

30/7/19.

ವಿಷಯ ಸಂಖ್ಯೆ : 12:03

**ವಿಷಯ : CIQA ರಚನೆ – ಸ್ವರೂಪ**

----

ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯ ವಾಕ್ಯ ಹೊಂದಿರುವ ಕರಾಮುವಿಯು 23 ವರ್ಷ ಪೂರೈಸಿ; ಅಧಿನಿಯಮದಲ್ಲಿ ಉಲ್ಲೇಖಿಸಿರುವ ಉದ್ದೇಶಗಳನ್ನು ಈಡೇರಿಸಲು ದಾಪುಗಾಲು ಹಾಕುತ್ತಿದೆ. ಕರಾಮುವಿಯು ಗುಣಮಟ್ಟದ ಶಿಕ್ಷಣವನ್ನು ತನ್ನ ವಿದ್ಯಾರ್ಥಿಗಳಿಗೆ ನೀಡುತ್ತಾ, ಅವರುಗಳ ಆಶೋತ್ತರವನ್ನು ಕೈಗೆಟುಕುವಂತೆ ಮಾಡುತ್ತಿದೆ. ಯುಜಿಸಿ ODL regulation ಅಧಿಸೂಚನೆ ದಿನಾಂಕ: 23.06.2017 ರಲ್ಲಿ ಪ್ರತಿ ಸಂಸ್ಥೆಯು ಗುಣಮಟ್ಟ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡುವ ಅಗತ್ಯತೆ ಇದ್ದು, ಆ ಸಂಸ್ಥೆಗಳು CIQA (Annexure-1)ನ್ನು ಸ್ಥಾಪಿಸಬೇಕು. ಆ ಕೇಂದ್ರಕ್ಕೆ ಒಬ್ಬರು ಪೂರ್ಣಕಾಲಿಕ ನಿರ್ದೇಶಕರನ್ನು ನಿಯೋಜಿಸಬೇಕು. ಕೇಂದ್ರಕ್ಕೆ ಒಂದು ಕಛೇರಿ, ಅದಕ್ಕೆ ಒಬ್ಬರು ಸಂಯೋಜನಾಧಿಕಾರಿ, ಇಬ್ಬರು ಗುಮಾಸ್ತರು, ಒಬ್ಬ ಡಿಇಓ, ಒಬ್ಬ ಪರಿಚಾರಕ: ಒಂದು ಗಣಕಯಂತ್ರ, ಪ್ರಿಂಟರ್ ಮತ್ತು ಜೆರಾಕ್ಸ್ ಮೆಷಿನ್ ಅಥವ Two in one ವ್ಯವಸ್ಥೆ ಇರುವ ಯಂತ್ರದ ಅಗತ್ಯವಿದೆ. CIQA ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ವಿಭಾಗಗಳು ನಿರ್ವಹಿಸುವ ಸೇವೆ ಗುಣಾತ್ಮಕವಾಗಿರಲಿ ಎಂದು ನಿರ್ಣಯಿಸಿ; ಈ ಬಗ್ಗೆ ಅಗತ್ಯ ಶಿಫಾರಸ್ಸು ಮಾಡುತ್ತದೆ ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಆಡಳಿತ ವರ್ಗವನ್ನು ಕೋರುತ್ತದೆ. CIQA, AAA ಮತ್ತು NAAC ನಿಂದ ವಿವಿಯನ್ನು assess ಮಾಡಿಸಿ ಒಂದು ಉತ್ತಮ grade ಪಡೆಯಲು ಅಗತ್ಯ ಕಾರ್ಯವನ್ನು ನಿರ್ವಹಿಸುತ್ತದೆ. ಹೊಸ ಕೋರ್ಸುಗಳು, ಕೌಶಲ್ಯಾಧಾರಿತ ಶಿಕ್ಷಣ, ಮಾನ್ಯತೆ ಪಡೆಯುವುದು, ಸಂಶೋಧನೆ ವೃದ್ಧಿಪಡಿಸುವುದು; ವಿವಿಧ ಸಂಸ್ಥೆಗಳಿಂದ ಅನುದಾನ ಪಡೆಯುವ ಎಲ್ಲಾ ಕೆಲಸ ಮಾಡುತ್ತದೆ.

<u>CIQA – Structure</u>

VC
↑
Registrar
↑
CIQA

CIQA ನಿರ್ದೇಶಕರು, ಕರಾಮುವಿಯಲ್ಲಿರುವ ಶೈಕ್ಷಣಿಕ, ಪ್ರವೇಶಾತಿ, ಕಲಿಕಾರ್ಥಿ ಸಹಾಯಕ ಕೇಂದ್ರ, ಮುಖ್ಯ ಪರೀಕ್ಷಾಂಗ, ಆಡಳಿತ, ತಾಂತ್ರಿಕ ವಿಭಾಗ ಮತ್ತು ವಿವಿಯಲ್ಲಿ ಎಲ್ಲಾ ಸೇವೆಗಳು ಗುಣಮಟ್ಟ ವೃದ್ಧಿಸುವಂತೆ ಸಂಯೋಜನೆ ಮಾಡುತ್ತದೆ. ಅಲ್ಲದೆ ಅಧ್ಯಾಪಕರು, ಅಧ್ಯಾಪಕೇತರರು ಪರಿಣಾಮಕಾರಿಯಾಗಿ ಕೆಲಸ ಮಾಡಿ ವಿದ್ಯಾರ್ಥಿಗಳಿಗೆ ಅತ್ಯಂತ ಗುಣಮಟ್ಟದ ಸೇವೆ ಒದಗಿಸುತ್ತದೆ. CIQAಗೆ ಪೂರ್ಣಕಾಲಿಕ ನಿರ್ದೇಶಕರು ಮತ್ತು ಅದರ ರಚನೆ ಕುರಿತಾಗಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿದ್ದು, ಅನುಮೋದನೆ ಕೋರಿದೆ.

ತೀರ್ಮಾನ : ಯುಜಿಸಿ ದೂರಶಿಕ್ಷಣ ನಿಯಮಾವಳಿ – 2017ರ ಪ್ರಕಾರ CIQA ಅನ್ನು ಔಪಚಾರಿಕವಾಗಿ ಸ್ಥಾಪಿಸಲಾಗಿತ್ತು. ಇದಕ್ಕೆ ಪ್ರೊ. ಜಗದೀಶರವರನ್ನು ನಿರ್ದೇಶಕರನ್ನಾಗಿ ಮಾಡಲಾಗಿತ್ತು. 32 ಕೋರ್ಸ್‌ಗಳ PPRಗಳನ್ನು ಯುಜಿಸಿಗೆ ಸಲ್ಲಿಸಲಾಗಿತ್ತು. ಪುಟ ಸಂಖ್ಯೆ – 51 ರಿಂದ 53 ಯುಜಿಸಿ ದೂರಶಿಕ್ಷಣ ನಿಯಮಾವಳಿ – 2017ರ ಪ್ರಕಾರ CIQA ಕಾರ್ಯ ನಿರ್ವಹಣೆ ಮಾಡಬೇಕಾಗಿದೆ. ಈ ಕೇಂದ್ರಕ್ಕೆ ಪ್ರತ್ಯೇಕ ಕಛೇರಿ, ಅಗತ್ಯ ಸಿಬ್ಬಂದಿ ಮತ್ತು ಪರಿಕರಗಳನ್ನು ಒದಗಿಸುವುದು ಮತ್ತು CIQA ಸಮಿತಿಯನ್ನು ಪುನರ್‌ರಚಿಸಲು ಶಿಫಾರಸ್ಸು ಮಾಡಲಾಯಿತು.

----

30/7/19
ಕುಲಸಚಿವರು

ಕುಲಪತಿಗಳು
30/7/19

ವಿಷಯ ಸಂಖ್ಯೆ 12:04

ವಿಷಯ : Ph.D ಪ್ರವೇಶ ಪರೀಕ್ಷೆ ದಿನಾಂಕವನ್ನು ನಿಗದಿಪಡಿಸುವ ಬಗೆಗೆ.

ತೀರ್ಮಾನ : **Citizens action group, Begnaluru,** ಇವರಿಂದ ಮಾನ್ಯ ಕುಲಪತಿಯವರಿಗೆ **e-mail** ಬಂದಿದ್ದು, **Ph.D** ಪ್ರವೇಶ ಪರೀಕ್ಷೆ ದಿನಾಂಕವನ್ನು ನಿಗದಿಪಡಿಸಲು ಮನವಿ ಮಾಡಲಾಗಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ **Ph.D** ಪ್ರವೇಶ ಪರೀಕ್ಷೆಯನ್ನು ದಿನಾಂಕ: 25.08.2019 ರಂದು ನಡೆಸಲು ಶಿಫಾರಸ್ಸು ಮಾಡಿತು. ಕುಲಸಚಿವ (ಪರೀಕ್ಷಾಂಗ) ಇವರು ಸದರಿ ಪರೀಕ್ಷೆಯನ್ನು 25-08-2019 ರಂದು ಕಡ್ಡಾಯವಾಗಿ ನಡೆಸುವಂತೆ ನಿರ್ಣಯಿಸಿತು.

----

ವಿಷಯ ಸಂಖ್ಯೆ 12:04(A)

ವಿಷಯ: ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ಕಾಲೇಜುಗಳಲ್ಲಿ ಇರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಪರಿಶೀಲನಾ ತಂಡವು ಪರಿಶೀಲಿಸಬೇಕಿರುವ ಅಂಶಗಳ 'ಮಾರ್ಗಸೂಚಿ' ಮತ್ತು ನಿಗದಿತ 'ನಮೂನೆ'ಗೆ ಅನುಮೋದನೆ ಕುರಿತು.

**********

ವಿದ್ಯಾರ್ಥಿ ಪ್ರವೇಶಾತಿಯನ್ನು ಹೆಚ್ಚಿಸುವ ಸಲುವಾಗಿ 2019-20ನೇ ಸಾಲಿಗೆ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರ / ಅಧ್ಯಯನ ಕೇಂದ್ರಗಳಲ್ಲಿ ಸ್ಥಾಪಿಸಲು ವಿಶ್ವವಿದ್ಯಾನಿಲಯ ನಿರ್ಧರಿಸಿದೆ. ಈ ಸಂಬಂಧ ಪತ್ರಿಕಾ ಜಾಹಿರಾತನ್ನು ನೀಡಿ ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ರಾಜ್ಯದ ವಿವಿಧ ಪದವಿ ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ಆಹ್ವಾನಿಸಿರುವ ಕಾಲೇಜುಗಳು ಕಲಿಕಾರ್ಥಿ ಸಹಾಯ ಕೇಂದ್ರವಾಗುವ ಎಲ್ಲಾ ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದೆಯೇ ಎಂಬುದನ್ನು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸುವ ಸಲುವಾಗಿ ತಂಡವನ್ನು ರಚಿಸಿ, ಪರಿಶೀಲನೆ ನಡೆಸಲು ನಿರ್ಣಯಿಸಿದೆ. ತಂಡವು ಪರಿಶೀಲನಾ ಸಂದರ್ಭದಲ್ಲಿ ಪರಿಗಣಿಸಬೇಕಾದ ಅಂಶಗಳನ್ನು ಒಳಗೊಂಡ ಮಾರ್ಗದರ್ಶಿಕೆಯನ್ನು ಮತ್ತು ನಿಗದಿತ ನಮೂನೆಯನ್ನು ಸಿದ್ಧಪಡಿಸಲಾಗಿದೆ. ಸದರಿ 'ಮಾರ್ಗಸೂಚಿ' ಮತ್ತು 'ನಮೂನೆ'ಯನ್ನು ಶೈಕ್ಷಣಿಕ ಮಂಡಳಿಯ ಅವಗಾಹನೆ ಮತ್ತು ಚರ್ಚೆಗೆ ವಿಷಯ ಮಂಡಿಸಿದೆ.

ತೀರ್ಮಾನ : ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ಕಾಲೇಜುಗಳಲ್ಲಿ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಪರಿಶೀಲನಾ ತಂಡವು ಪರಿಶೀಲಿಸಬೇಕಿರುವ ಅಂಶಗಳ 'ಮಾರ್ಗಸೂಚಿ' ಮತ್ತು ನಿಗದಿತ 'ನಮೂನೆ'ಯನ್ನು ಸಭೆಯು ಪರಿಶೀಲಿಸಿತು. ಆಯ್ಕೆಯಾದ ಕಲಿಕಾರ್ಥಿ ಸಹಾಯ ಕೇಂದ್ರ ಮತ್ತು ವಿಶ್ವವಿದ್ಯಾನಿಲಯವು 100 ರೂಪಾಯಿಗಳ ಸ್ಟಾಂಪ್ ಪತ್ರದಲ್ಲಿ ಒಡಂಬಡಿಕೆ ಮಾಡಿಕೊಳ್ಳುವುದು ಎಂದು ಸಭೆಯು ನಿರ್ಣಯಿಸಿ ಮಾರ್ಗಸೂಚಿ ಮತ್ತು ನಮೂನೆಯನ್ನು ಅನುಮೋದಿಸಿತು. ಪರಿಶೀಲನಾ ತಂಡವು ತನ್ನ ವರದಿಯನ್ನು ಕುಲಸಚಿವರಿಗೆ ಸಲ್ಲಿಸುವಂತೆ ನಿರ್ಣಯಿಸಲಾಯಿತು.

----

24/7/19

ಕುಲಸಚಿವರು

ಕುಲಪತಿಗಳು

30/7/19

<u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಂಡಿಸಲಾದ ಇತರೆ ವಿಷಯಗಳು :-</u>

ವಿಷಯ ಸಂಖ್ಯೆ 12:05

ವಿಷಯ : **Ph.D course in Geography – Computer Science** ಪ್ರಾರಂಭ ಮಾಡುವ ಬಗೆಗೆ.

----

ತೀರ್ಮಾನ : ಭೂಗೋಳ ಅಧ್ಯಯನ ವಿಭಾಗ ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಲ್ಲಿ Ph.D course ಗಳಿಗೆ ಮಾರ್ಗದರ್ಶಕರಾಗಿ ಅರ್ಹತೆ ಹೊಂದಿರುವ ಅಧ್ಯಾಪಕರುಗಳು ಇರುವುದನ್ನು ಸಭೆಯು ಗಮನಿಸಿತು. **Ph.D course in Geography – Computer Science** ಗಳಿಗೆ ಸಾಕಷ್ಟು ವಿಚಾರಣೆಗಳು ಬಂದಿರುವುದನ್ನು ಸಭೆಯು ಪರಿಗಣಿಸಿ, ಸದರಿ ವಿಭಾಗಗಳಲ್ಲಿ **Ph.D course** ಗಳನ್ನು ಪ್ರಾರಂಭಿಸಲು ಸಭೆಯು ನಿರ್ಣಯಿಸಿತು. ಈ ಕುರಿತು ಅಧಿಸೂಚನೆಯನ್ನು ಸಿದ್ಧಪಡಿಸಿ ಪ್ರಕಟಣೆ ಹೊರಡಿಸಲು ಸಭೆ ಶಿಫಾರಸ್ಸು ಮಾಡಿತು. ಈ ಕೋರ್ಸ್‌ಗಳಿಗೆ ಅಭ್ಯರ್ಥಿಗಳು ದಿನಾಂಕ: 10.08.2019 ರೊಳಗೆ ಅರ್ಜಿ ಸಲ್ಲಿಸುವುದು. ವಿಶ್ವವಿದ್ಯಾನಿಲಯವು ಈ ಎರಡು ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ದಿನಾಂಕ: 08.09.2019 ರಂದು ಮೈಸೂರು ಕೇಂದ್ರದಲ್ಲಿ ಮಾತ್ರ ನಡೆಸಲು ತೀರ್ಮಾನಿಸಿತು. ಮುಂದುವರೆದು ಈ ಕೋರ್ಸ್‌ಗಳ ಅರ್ಹ ಅಧ್ಯಾಪಕರುಗಳಿಗೆ **Research Guide** ಮಾನ್ಯತೆ ನೀಡಲು ನಿರ್ಣಯಿಸಿತು.

----

ವಿಷಯ ಸಂಖ್ಯೆ 12:06

ವಿಷಯ : ಕೆಲವು ಅಧ್ಯಾಪಕರುಗಳು ಇತ್ತೀಚಿನ ದಿನಗಳಲ್ಲಿ **Ph.D** ಪಡೆದಿದ್ದು, ಅವರುಗಳಿಗೆ **Guide ship** ಕೊಡುವ ಬಗೆಗೆ.

----

ತೀರ್ಮಾನ : ಕರಾಮುವಿನ ವಿವಿಧ ಅಧ್ಯಯನ ವಿಭಾಗಗಳು ನಡೆಸುತ್ತಿರುವ **Ph.D course** ಗಳಿಗೆ ಬಹಳ ಬೇಡಿಕೆ ಇರುವುದನ್ನು ಸಭೆ ಗಮನಿಸಿತು. ಬೇಡಿಕೆ ಒತ್ತಡವನ್ನು ನೀಗಿಸುವ ನಿಟ್ಟಿನಲ್ಲಿ ವಿವಿಧ ವಿಭಾಗಗಳಲ್ಲಿ ಇತ್ತೀಚೆಗೆ ಯುಜಿಸಿ ನಿಯಮಗಳ ಪ್ರಕಾರ ಅರ್ಹತೆ ಪಡೆದ ಅಧ್ಯಾಪಕರುಗಳನ್ನು ಮಾರ್ಗದರ್ಶಕರನ್ನಾಗಿ ಪರಿಗಣಿಸಲು ಅಗತ್ಯ ಪ್ರಕ್ರಿಯೆಯನ್ನು ನಿರ್ವಹಿಸಲು ಸಭೆಯು ನಿರ್ಣಯಿಸಿತು.

----

30/7/19

ಕುಲಸಚಿವರು

ಕುಲಪತಿಗಳು

30/7/19

ವಿಷಯ ಸಂಖ್ಯೆ 12:07

ವಿಷಯ : ಸಹಭಾಗಿತ್ವ ಸಂಸ್ಥೆಗಳ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳ ಪರೀಕ್ಷಾ ದಾಖಲಾತಿ ಪರಿಶೀಲನೆಯ ಬಗ್ಗೆ.

---

ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಗಳ ವಿವಿಧ ಶಿಕ್ಷಣಕ್ರಮಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿ ಹಾಗೂ ವಿವಿಧ ಪ್ರಮಾಣ ಪತ್ರಗಳ ಕೋರಿಕೆ ಸಂಬಂಧ ದಿನನಿತ್ಯ ಹಲವಾರು ಅರ್ಜಿಗಳು ಬರುತ್ತಿದ್ದು, ದಾಖಲಾತಿಗಳನ್ನು ಪರಿಶೀಲಿಸಲು ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳಲಾಗುತ್ತಿದ್ದು, ಪರಿಶೀಲನೆಯ ವಿಳಂಬವನ್ನು ತಪ್ಪಿಸಲು ಹಾಗೂ ನಿಗದಿತ ಸಮಯಕ್ಕೆ ವಿದ್ಯಾರ್ಥಿಗಳಿಗೆ ಸ್ಪಂದಿಸಲು ಈ ಮುಂದಿನ ದಾಖಲಾತಿ ಪರಿಶೀಲನೆಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ.

1996 ರಿಂದ 2012 ರವರೆಗೆ ಸಹಭಾಗಿತ್ವ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ವಿವಿಧ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಪರೀಕ್ಷಾ ವಿಭಾಗದ ಪರೀಕ್ಷಾ ವಹಿ, ಎ-ಫಾರಂ, ಓಎಂಆರ್ ಗಳು ಅಂಕಪಟ್ಟಿಗೆ ಹೊಂದಾಣಿಕೆ (ತಾಳೆಯಾದಲ್ಲಿ, ಪ್ರವೇಶಾತಿಯ ಅನುಮೋದನಾ ಪಟ್ಟಿಯನ್ನು ಪರಿಗಣಿಸದೆ ಅಂತಹ ವಿದ್ಯಾರ್ಥಿಗಳ ಮನವಿಯ ಅರ್ಜಿಗಳನ್ನು ವಿಳಂಬ ಮಾಡದೆ ವಿಲೇವಾರಿ ಮಾಡಲು ಅಗತ್ಯ ನಿರ್ಣಯ ಕೈಗೊಳ್ಳುವಂತೆ ಶೈಕ್ಷಣಿಕ ಮಂಡಳಿ ಸಭೆಯನ್ನು ಕೋರಲಾಗಿದೆ.

ತೀರ್ಮಾನ : ಸದರಿ ವಿಷಯದ ಬಗೆಗೆ ಇರುವ ಸಮಸ್ಯೆಗಳನ್ನು ಕುಲಸಚಿವ (ಪರೀಕ್ಷಾಂಗ) ರವರು ಸಭೆಯ ಗಮನಕ್ಕೆ ತಂದರು. ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿದ ಶೈಕ್ಷಣಿಕ ಮಂಡಳಿ ಸಭೆಯು ಒಂದು ಉಪಸಮಿತಿಯನ್ನು ರಚಿಸಿ, ಆ ಮೂಲಕ ಸಮಸ್ಯೆಯನ್ನು ಕಾಲಮಿತಿಯೊಳಗೆ ಪರಿಶೀಲಿಸಿ ಅಗತ್ಯ ಶಿಫಾರಸ್ಸುಗಳನ್ನು ಮಾಡಲು ಮತ್ತು ಉಪಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸುವಂತೆ ಸಭೆಯು ತೀರ್ಮಾನಿಸಿತು. ಮುಂದುವರೆದು ಉಪಸಮಿತಿಯನ್ನು ರಚಿಸಿಕೊಳ್ಳುವ ಜವಾಬ್ದಾರಿಯನ್ನು ಕುಲಸಚಿವ (ಪರೀಕ್ಷಾಂಗ) ರವರಿಗೆ ವಹಿಸಲು ನಿರ್ಣಯಿಸಲಾಯಿತು.

---

ವಿಷಯ ಸಂಖ್ಯೆ : 12.08

ವಿಷಯ : **Delivery of Services in Academic and Evaluation** ಪರಿನಿಯಮ ಅನುಮೋದಿಸುವ ಬಗ್ಗೆ.

---

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 1996 ರಲ್ಲಿ ಪ್ರಾರಂಭವಾಗಿ ಸುಮಾರು 23 ವರ್ಷಗಳನ್ನು ಪೂರೈಸಿದೆ. ಕರಾಮುವಿ ಅಧಿನಿಯಮ 1992ರ ಪ್ರಕಾರ ವಿಶ್ವವಿದ್ಯಾನಿಲಯವು ದೂರಶಿಕ್ಷಣವನ್ನು ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ಧ್ಯೇಯ ವಾಕ್ಯದೊಂದಿಗೆ ರಾಜ್ಯದಾದ್ಯಂತ ನೀಡುತ್ತಿದೆ. ನಿಯಮಗಳ ಪ್ರಕಾರ ಸಂಪರ್ಕ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧ ಕೇಂದ್ರಗಳಲ್ಲಿ ನಡೆಸುತ್ತಿದೆ. ಹಾಗೆಯೇ ಪರೀಕ್ಷೆಗಳನ್ನು ಸಹ ವಿವಿಧೆಡೆ ಆಯೋಜಿಸುತ್ತಿದೆ. ಈ ಸಂಪರ್ಕ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯದ Core faculty members ಭಾಗವಹಿಸಿ ಪಾಠ ಪ್ರವಚನ ಮಾಡುತ್ತಿದ್ದಾರೆ. ಅಧ್ಯಾಪಕರುಗಳು ಪ್ರತಿಯೊಂದು ಕೇಂದ್ರಗಳಿಗೆ ತೆರಳಿ 5 ದಿನ ನಡೆಸಬೇಕಾಗುತ್ತದೆ. ಹೋಟೆಲ್ ರೂಮಿನ ಬಾಡಿಗೆ ದುಬಾರಿಯಾಗಿರುತ್ತಿದ್ದು ವಿಶ್ವವಿದ್ಯಾನಿಲಯ ಪಾವತಿಸುತ್ತಿದ್ದ DA ಅತ್ಯಲ್ಪವಾಗಿದ್ದು, ಅಧ್ಯಾಪಕರುಗಳು ಹೆಚ್ಚುವರಿ ಮೊಬಲಗನ್ನು ತಮ್ಮ ಕೈಯಿಂದಲೇ ಭರಿಸುವಂತಹ ಸಂದರ್ಭವಿತ್ತು. ಅದನ್ನು ಪರಿಹರಿಸಲು ವಿಶ್ವವಿದ್ಯಾನಿಲಯವು ವಿಷಯ ಸಂಯೋಜಕರ ಭತ್ಯೆಯನ್ನು ಆದೇಶದ ಮೇರೆಗೆ ಪಾವತಿಸುತ್ತಿತ್ತು. ಈ ಬಗ್ಗೆ ಆಡಿಟ್ ಆಕ್ಷೇಪಣೆಯಾಗಿದ್ದು, ಅವುಗಳನ್ನು ಪರಿಹರಿಸಿಕೊಳ್ಳಲು ಆಡಿಟ್ ವೃಂದವು ಒಂದು ಪರಿನಿಯಮವನ್ನು ಮಾಡಿಕೊಳ್ಳಲು ಸೂಚಿಸಿತ್ತು.

ಕುಲಸಚಿವರು 30/7/19

ಕುಲಪತಿಗಳು 30/7/19

ಹಾಗೆಯೇ ಕರಾಮುವಿಯು ಪರೀಕ್ಷೆಗಳನ್ನು ನಡೆಸಿ ಕೇಂದ್ರ ಮೌಲ್ಯಮಾಪನವನ್ನು 1996 ರಿಂದಲೂ ಮಾಡಿಸಿದೆ. ಈ ಮೌಲ್ಯಮಾಪನಕ್ಕೆ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಭಾಗವಹಿಸಿರುತ್ತಾರೆ. ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದಂತೆ ಇರುವ ಪ್ರಕಾರ ಕರಾಮುವಿಯಲ್ಲಿ ತನ್ನ ಅಧ್ಯಾಪಕರುಗಳಿಗೆ ಸ್ಥಳೀಯ ಸಾರಿಗೆ ಭತ್ಯೆಯನ್ನು ಆದೇಶದ ಮೇರೆಗೆ ಪಾವತಿಸಿತ್ತು. ಇಂತಹ ವಿಷಯಕ್ಕೂ ಆಡಿಟ್ ಆಕ್ಷೇಪಣೆಯಾಗಿದ್ದು ಆಡಿಟ್ ವೃಂದವು ಪ್ರತ್ಯೇಕ ಪರಿನಿಯಮವನ್ನು ರಚಿಸಿಕೊಳ್ಳುವಂತೆ ಸೂಚಿಸಿತ್ತು. ಅದರಂತೆ ಹಣಕಾಸು ಅಧಿಕಾರಿಗಳು, ಕುಲಸಚಿವ (ಪರೀಕ್ಷಾಂಗ), ಡೀನ್ (ಅಧ್ಯಯನ ಕೇಂದ್ರ) ಮತ್ತು ಡೀನ್ (ಶೈಕ್ಷಣಿಕ) ಇವರ ಅಭಿಪ್ರಾಯ ಪಡೆದು ಸದರಿ ಪರಿನಿಯಮವನ್ನು ಸಿದ್ಧಪಡಿಸಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದ್ದು, ಈ ಬಗ್ಗೆ ನಿರ್ಣಯಿಸುವಂತೆ ಕೋರಿದೆ.

ತೀರ್ಮಾನ : **Delivery of Services in Academic and Evaluation in KSOU** ಎಂಬ ಪರಿನಿಯಮವನ್ನು ಶೈಕ್ಷಣಿಕ ಮಂಡಳಿ ಸಭೆಯು ಸಮಗ್ರವಾಗಿ ಚರ್ಚಿಸಿತು ಮತ್ತು ಕರಾಮುವಿಯು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಿಗಿಂತ 'ವಿಶೇಷ ಉನ್ನತ ಶಿಕ್ಷಣ ಸಂಸ್ಥೆ'ಯಾಗಿರುವುದರಿಂದ ಇಂತಹ ಪರಿನಿಯಮ ಅತ್ಯಗತ್ಯ ಎಂಬುದನ್ನು ಮನಗಂಡು ಕರಡು ಪರಿನಿಯಮಕ್ಕೆ ಅನುಮೋದನೆ ನೀಡಿತು.

----

ವಿಷಯ ಸಂಖ್ಯೆ : 12.09

ವಿಷಯ : ಶಿಕ್ಷಣಶಾಸ್ತ್ರ ವಿಭಾಗದ ಅಧ್ಯಾಪಕರುಗಳನ್ನು ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಬಗೆಗೆ.

----

ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಸ್ತುತ ಬಿ.ಇಡಿ ಕೋರ್ಸ್ ಮಾತ್ರ ಇದ್ದು, ಅದು ಯುಜಿ ಕಾರ್ಯಕ್ರಮವಾಗಿರುತ್ತದೆ. ಈ ಹಿಂದೆ ಸದರಿ ವಿಭಾಗವು ಎಂ.ಇಡಿ ಕೋರ್ಸ್‌ನ್ನು ಸಹ ನಡೆಸುತ್ತಿದ್ದು ಅದು NCTE ನಿರ್ದೇಶನದ ಮೇರೆಗೆ ಸ್ಥಗಿತಗೊಂಡಿರುತ್ತದೆ. ಎಂ.ಇಡಿ ಕೋರ್ಸ್ ಇದ್ದ ಕಾಲಾವಧಿಯಲ್ಲಿ ಡಾ. ಲಕ್ಷ್ಮಿ, ವಿಭಾಗದ ಮುಖ್ಯಸ್ಥರು, ಇವರನ್ನು ಮಾರ್ಗದರ್ಶಕರಾಗಿ ನಿರ್ವಹಿಸುವಂತೆ ನಿರ್ದೇಶಿಸಲಾಗಿತ್ತು. ಅದರಂತೆ ಡಾ. ಲಕ್ಷ್ಮಿ ಮಾರ್ಗದರ್ಶಕರಾಗಿ ಸುಮಾರು 12 ವಿದ್ಯಾರ್ಥಿಗಳು ಪಿಹೆಚ್.ಡಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಪ್ರಸ್ತುತ ಬಿ.ಇಡಿ ಕೋರ್ಸ್ ಇದ್ದರೂ ಶಿಕ್ಷಣಶಾಸ್ತ್ರದಲ್ಲಿನ ಪಿಹೆಚ್.ಡಿ ಕೋರ್ಸ್ ಅನ್ನು ಪ್ರಾರಂಭಿಸಲು ಅಧಿಸೂಚನೆ ಹೊರಡಿಸಲಾಗಿತ್ತು. ಈ ಕೋರ್ಸ್‌ಗೆ ನೂರಾರು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಮಾರ್ಗದರ್ಶನದ ಸಮಸ್ಯೆಯನ್ನು ಬಗೆಹರಿಸುವಂತೆ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ವಿಷಯ ಮಂಡಿಸಿ ನಿರ್ದೇಶನ ಕೋರಲಾಯಿತು.

ತೀರ್ಮಾನ : ಶಿಕ್ಷಣಶಾಸ್ತ್ರ ವಿಭಾಗದಲ್ಲಿ ಪ್ರಸ್ತುತ ಬಿ.ಇಡಿ ಕೋರ್ಸ್ ಮಾತ್ರ ಇರುವುದನ್ನು ಗಮನಿಸಿ, ಈ ಹಿಂದೆ ಇದ್ದ ಎಂ.ಇಡಿ ಕೋರ್ಸ್ ಆಧಾರದ ಮೇರೆಗೆ ಪಿಹೆಚ್.ಡಿ ಕೋರ್ಸ್‌ನ್ನು ಪ್ರಾರಂಭಿಸಿದ್ದು, ಆ ಸಂದರ್ಭದಲ್ಲಿ ಡಾ. ಲಕ್ಷ್ಮಿ ರವರು ಮಾರ್ಗದರ್ಶಕರಾಗಿದ್ದರು ಎಂಬ ಅಂಶವನ್ನು ಪರಿಗಣಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ವಿಭಾಗದಲ್ಲಿ ಯುಜಿಸಿ ನಿಯಮ ಪೂರೈಸಿರುವ ಮತ್ತು ಅಧ್ಯಯನ ಮಂಡಳಿ ಸಭೆಯು ಶಿಫಾರಸ್ಸು ಮಾಡಿರುವ ಆಧಾರದ ಮೇರೆಗೆ ವಿಭಾಗದ ಎಲ್ಲಾ ಅರ್ಹ ಅಧ್ಯಾಪಕರುಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ಮಾನ್ಯತೆ ನೀಡುವಂತೆ ಸಭೆ ನಿರ್ಣಯಿಸಿತು.

30/1/19

ಕುಲಸಚಿವರು

ಕುಲಪತಿಗಳು

30/7/19

ವಿಷಯ ಸಂಖ್ಯೆ : 12.10

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಮತ್ತಷ್ಟು ಎತ್ತರಿಸುವ ದೃಷ್ಟಿಯಿಂದ ಮತ್ತು ಮುಂಬರುವ ನ್ಯಾಕ್ ಮಾನ್ಯತೆಯನ್ನು ಗಮನದಲ್ಲಿರಿಸಿಕೊಂಡು ಕೆಲವು ಸಂಶೋಧನಾ ಚಟುವಟಿಕೆಗಳನ್ನು ಗುಣಾತ್ಮಕವಾಗಿ ಪ್ರತಿಷ್ಠಾಪಿಸಿ ಮುನ್ನಡೆಸುವ ಕುರಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಮಾನ್ಯ ಕುಲಪತಿಗಳ ನಾಯಕತ್ವ ಮತ್ತು ದೂರದೃಷ್ಟಿ ಕಾರ್ಯಯೋಜನೆಗಳೊಂದಿಗೆ ಮುನ್ನಡೆಯುತ್ತಿರುವುದು ಶ್ಲಾಘನೀಯವಾದದ್ದು. ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಮತ್ತಷ್ಟು ಎತ್ತರಿಸುವ ದೃಷ್ಟಿಯಿಂದ ಮತ್ತು ಮುಂಬರುವ ನ್ಯಾಕ್ ಮಾನ್ಯತೆಯನ್ನು ಗಮನದಲ್ಲಿರಿಸಿಕೊಂಡು ಕೆಲವು ಸಂಶೋಧನಾ ಚಟುವಟಿಕೆಗಳನ್ನು ಗುಣಾತ್ಮಕವಾಗಿ ಪ್ರತಿಷ್ಠಾಪಿಸಿ ಮುನ್ನಡೆಸಬೇಕಾಗಿರುವುದರಿಂದ ಈ ಕೆಳಗಿನ ಹಲವು ಕಾರ್ಯ ಯೋಜನೆಗಳ ಪ್ರಕ್ರಿಯೆಗಳನ್ನು ನಿಯಮಾನುಸಾರ ಆರಂಭಿಸಬೇಕಾಗುತ್ತದೆ.

1. ಕರಾಮುವಿಯಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಕ್ರಿಯಾತ್ಮಕವಾಗಿ ರೂಪಿಸಲು ಪ್ರತಿಯೊಬ್ಬ ಅಧ್ಯಾಪಕರೂ ಸಹ Research Project ಗಳನ್ನು UGC, ICSSR, DBT ಇತ್ಯಾದಿ ಸಂಸ್ಥೆಗಳಿಂದ ಪಡೆದುಕೊಳ್ಳಲು ಅನುಕೂಲವಾಗುವಂತೆ 'Funding Sources and Proposal Writing for Research Projects' ಎನ್ನುವ ವಿಷಯದ ಮೇಲೆ ಅಧ್ಯಾಪಕರುಗಳಿಗೆ ಡೀನ್ (ಶೈ) ವತಿಯಿಂದ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಬಹುದಾಗಿದೆ.

2. ವಿಜ್ಞಾನ ವಿಭಾಗಗಳ ಸಂಶೋಧನಾ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಂತ ಅಗತ್ಯವಾದುದಾಗಿದ್ದು, ಈ ವಿಭಾಗಗಳಿಗೆ ಅಗತ್ಯತೆಗಳಿಗನುಗುಣವಾಗಿ ಲ್ಯಾಬ್‌ಗಳನ್ನು ಸ್ಥಾಪಿಸುವ ಸಲುವಾಗಿ ಆಯಾ ಮುಖ್ಯಸ್ಥರಿಂದ ಪ್ರಸ್ತಾವನೆಗಳನ್ನು ಪಡೆದುಕೊಂಡು ಸಾಧ್ಯವಾದಲ್ಲಿ ಅವುಗಳನ್ನು ಕ್ರೋಢೀಕೃತ ಪ್ರಸ್ತಾವನೆಗಳೊಡನೆ ಲ್ಯಾಬ್ ಸಲಕರಣೆಗಳು, ರಾಸಾಯನಿಕಗಳು ಮತ್ತು ಇತರೆ ಸೌಲಭ್ಯಗಳನ್ನು ಸ್ಥಾಪಿಸಲು ಅಗತ್ಯ ಪ್ರಕ್ರಿಯೆಗಳನ್ನು ನಿಯಮಾನುಸಾರ ಆರಂಭಿಸಲು ಅನುಮತಿ ನೀಡಬಹುದಾಗಿದೆ.

   ಸದರಿ ಲ್ಯಾಬೊರೇಟರಿ ಸೌಲಭ್ಯವನ್ನು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರಾಯೋಗಿಕ ತರಗತಿಗಳು, ಪರೀಕ್ಷಾ ಕಾರ್ಯಗಳು, ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನಾ ಕಾರ್ಯಗಳಿಗೆ Research Project ಗಳ ಸಂಶೋಧನೆಗಳಿಗೆ ಉಪಯೋಗಿಸಿಕೊಳ್ಳಬಹುದಾಗಿದೆ.

3. ವಿಜ್ಞಾನ ವಿಭಾಗಗಳು, ಸ್ಥಳೀಯ ಕೈಗಾರಿಕೆಗಳು ಮತ್ತು ಇತರ Research Lab ಗಳೊಡನೆ ಸಂಶೋಧನಾ ಒಡಂಬಡಿಕೆಗಳನ್ನು ಮಾಡಿಕೊಂಡು ಕರಾಮುವಿಯ Research Lab ಗಳಲ್ಲಿ ಸಂಶೋಧಿಸಲ್ಪಟ್ಟ ಸಂಶೋಧನಾ ಫಲಿತಾಂಶಗಳನ್ನು ಕೈಗಾರಿಕೆಗಳು ಮತ್ತು ಇತರ ಸಂಸ್ಥೆಗಳ ಉಪಯೋಗಕ್ಕಾಗಿ Collaborative Research ಮತ್ತು ಇತರೆ ಗುಣಾತ್ಮಕ ಸಂಶೋಧನೆಗಳಿಗಾಗಿ ಏರ್ಪಡಿಸಿಕೊಳ್ಳಲು ಬೇಕಾಗುವ ಅಗತ್ಯ ತರಬೇತಿ, ಮೂಲಸೌಕರ್ಯಾಭಿವೃದ್ಧಿ ಇತ್ಯಾದಿಗಳನ್ನು ಸೃಜಿಸಿಕೊಳ್ಳಲು ಈ ಸಂಬಂಧಿತ ಪ್ರಕ್ರಿಯೆಗಳನ್ನು ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ.

4. Intellectual Property Rights (IPR) ಮತ್ತು Industry Academic Innovative Projects ವಿಷಯಗಳ ಕುರಿತಂತೆ ಪ್ರತಿ ವರ್ಷವೂ ವಾರ್ಷಿಕ ಸಮ್ಮೇಳನ/ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವುದನ್ನು ರೂಢಿಸಿಕೊಳ್ಳುವ ಸಲುವಾಗಿ ಒಂದು ಸಮ್ಮೇಳನ ಸಂಘಟನಾ ಸಮಿತಿಯನ್ನು ವಿಶ್ವವಿದ್ಯಾನಿಲಯದಲ್ಲಿ ರಚಿಸಿ, ಮುಂದಿನ ಪ್ರಕ್ರಿಯೆಗೆ ಅನುವು ಮಾಡಿಕೊಡಬಹುದಾಗಿದೆ.

30/7/19

ಕುಲಸಚಿವರು

ಕುಲಪತಿಗಳು

30/7/19

5. ಸಂಶೋಧನಾ ಚಟುವಟಿಕೆಗಳನ್ನು ಉತ್ಕೃಷ್ಟಗೊಳಿಸಲು ಪ್ರತಿ ಅಧ್ಯಾಪಕರು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ೦೩ ರಾಷ್ಟ್ರೀಯ/ಅಂತರ್‌ರಾಷ್ಟ್ರೀಯ Peer reviewed or UGC listed journal ಗಳಲ್ಲಿ ತಮ್ಮ ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸಲು ಮತ್ತು ರಾಷ್ಟ್ರೀಯ/ಅಂತರ್‌ರಾಷ್ಟ್ರೀಯ ಸಮ್ಮೇಳನ/ಕಾರ್ಯಾಗಾರಗಳಲ್ಲಿ ಸಂಶೋಧನಾ ಪತ್ರಿಕೆಗಳನ್ನು ಮಂಡಿಸುವುದನ್ನು ಕಡ್ಡಾಯ ಮಾಡಬಹುದಾಗಿದೆ ಹಾಗೂ ಪ್ರತಿ ಅಧ್ಯಾಪಕರು ತಲಾ ಕನಿಷ್ಠ ೦೩ ಸಂಶೋಧನಾ ಪತ್ರಿಕೆಗಳನ್ನು ರಾಷ್ಟ್ರೀಯ/ಅಂತರ್‌ರಾಷ್ಟ್ರೀಯ ಸಮ್ಮೇಳನ/ಕಾರ್ಯಾಗಾರಗಳಲ್ಲಿ ಸಂಶೋಧನಾ ಪತ್ರಿಕೆಗಳನ್ನು ಮಂಡಿಸುವುದನ್ನು ಕಡ್ಡಾಯ ಮಾಡಬಹುದಾಗಿದೆ.

6. ರಾಷ್ಟ್ರೀಯ/ಅಂತರ್‌ರಾಷ್ಟ್ರೀಯ ಸಮ್ಮೇಳನಗಳಲ್ಲಿ ಸಂಶೋಧನಾ ಪತ್ರಿಕೆಗಳನ್ನು ಮಂಡಿಸುವ ಅಧ್ಯಾಪಕರುಗಳಿಗೆ ವಾರ್ಷಿಕವಾಗಿ ತಲಾ ಒಬ್ಬ ಅಧ್ಯಾಪಕರಿಗೆ ಒಂದು ಬಾರಿ ಒಂದು ಕಡೆಯ actual ಪ್ರಯಾಣಭತ್ಯೆ ಮತ್ತು ನೋಂದಾವಣಿ ಭತ್ಯೆಯನ್ನು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ವಿಶ್ವವಿದ್ಯಾನಿಲಯದ ವತಿಯಿಂದ ನೀಡಲು ನಿಯಮವನ್ನು ರೂಪಿಸಲು ಸಾಧ್ಯವಾಗುವಂತೆ ಪ್ರಕ್ರಿಯೆಗಳನ್ನು ಆರಂಭಿಸಲು ಅನುಮತಿ ನೀಡಬಹುದಾಗಿದೆ.

7. ಸಂಶೋಧನಾ ಚಟುವಟಿಕೆಗಳಿಗೆ ಪೂರಕವಾಗಿ ಗ್ರಂಥಾಲಯದಲ್ಲಿ ಪುಸ್ತಕಗಳು, ನಿಯತಕಾಲಿಕೆಗಳು, IT infrastructure, e-learning, internet source ಗಳು ಲಭ್ಯವಾಗುವಂತೆ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಬಹುದಾಗಿದೆ.

8. ಕರಾಮುವಿಯಲ್ಲಿನ ಸಂಶೋಧನಾ ಕಾರ್ಯಗಳ ಉತ್ಕೃಷ್ಟತೆಗಾಗಿ ಸಮಾಜವಿಜ್ಞಾನ ಮತ್ತು ಮಾನವಿಕ ವಿಷಯಗಳನ್ನೊಳಗೊಂಡ ಮತ್ತು ವಿಜ್ಞಾನ ವಿಷಯಗಳಲ್ಲಿ ಒಂದೊಂದು National lever peer reviewed journal ಗಳನ್ನು ಆರಂಭಿಸುವ ಸಂಬಂಧ, ಪ್ರತ್ಯೇಕ 'ಪ್ರಕಟಣಾ ಸಮಿತಿ' ಗಳನ್ನು ರಚಿಸಿ ವಿಶ್ವವಿದ್ಯಾನಿಲಯದ ಅನುಮೋದನೆಯೊಡನೆ ಮುಂದಿನ ಕ್ರಮ ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ.

9. ಕರಾಮುವಿಯಲ್ಲಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹ ನೀಡುವ ಸಂಬಂಧ, ಆಂತರಿಕ ಸಂಶೋಧನಾ ನಿಧಿಯನ್ನು ಸ್ಥಾಪಿಸಿ, ಆಂತರಿಕ ಸಹಾಯಕ ಪ್ರಾಧ್ಯಾಪಕರುಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿ ಅನುಮೋದಿತ ಪ್ರಸ್ತಾವನೆಗಳಿಗೆ ೦೬ ತಿಂಗಳ ಕಿರು ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲು ರೂ.೪೦,೦೦೦/- ದಿಂದ ರೂ.೫೦,೦೦೦/- ಗಳವರೆಗೆ ಹಣಕಾಸು ಮಂಜೂರಾತಿಯನ್ನು ನೀಡುವ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ.

10. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ೨೦೧೯-೨೦ರ ಸಾಲಿನಿಂದ ಪಿಎಚ್.ಡಿ. ಪ್ರವೇಶಾತಿ ಪಡೆದುಕೊಳ್ಳುವ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಯು.ಜಿ.ಸಿ., ಐ.ಸಿ.ಎಸ್.ಎಸ್.ಆರ್., ಮುಂತಾದ ಸಂಸ್ಥೆಗಳಿಂದ ದೊರೆಯುವ ವಿದ್ಯಾರ್ಥಿ ವೇತನ ಮತ್ತು ಇತರೆ ಸವಲತ್ತುಗಳನ್ನು ದೊರಕಿಸಿಕೊಡುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಬಹುದಾಗಿದೆ.

ತೀರ್ಮಾನ : ಶೈಕ್ಷಣಿಕ ಮಂಡಳಿ ಸಭೆಯು ಮೇಲ್ಕಂಡ ವಿಷಯದಲ್ಲಿರುವ ಎಲ್ಲಾ ಅಂಶಗಳನ್ನು ಚರ್ಚಿಸಿ ಗುಣಾತ್ಮಕ ಶಿಕ್ಷಣದ ಮಟ್ಟವನ್ನು ಹೆಚ್ಚಿಸಲು ಮತ್ತು ನ್ಯಾಕ್‌ನಿಂದ ಉತ್ತಮ ಗ್ರೇಡ್‌ನ್ನು ಪಡೆದುಕೊಳ್ಳುವ ಸಲುವಾಗಿ ಕ್ರಮಸಂಖ್ಯೆ : 1 ರಿಂದ 7 ಮತ್ತು 10ನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಿತು. ಕ್ರಮಸಂಖ್ಯೆ 8 ಮತ್ತು 9ನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ನಿರ್ಣಯಿಸಿತು.

30/7/19

ಕುಲಸಚಿವರು

ಕುಲಪತಿಗಳು

30/7/19

ಪ್ರೊ. ಜಗದೀಶ ಡೀನ್ (ಶೈಕ್ಷಣಿಕ) ರವರು 1996 ರಿಂದ ಈವರೆವಿಗೆ ಶೈಕ್ಷಣಿಕ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದು, ದಿನಾಂಕ: 31.07.2019 ರಂದು ವಯೋನಿವೃತ್ತಿ ಹೊಂದುತ್ತಿದ್ದಾರೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಪ್ರೊ. ಜಗದೀಶರವರು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೋಸ್ಕರ ಉತ್ತಮ ಸೇವೆಯನ್ನು ಸಲ್ಲಿಸಿರುತ್ತಾರೆ ಎಂಬುದರ ಕುರಿತು ಶೈಕ್ಷಣಿಕ ಮಂಡಳಿ ಸಭೆಯು ಅವರನ್ನು ಅಭಿನಂದಿಸಿತು.

ಅಂತಿಮವಾಗಿ 12ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

30/7/19

**ಕುಲಸಚಿವರು ಹಾಗೂ**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗೂ ಅಧ್ಯಕ್ಷರು**
30/7/19.